<u>ದಿನಾಂಕಃ 06-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಪಾಟೀ ಸವಾಲುಃ- ಅರ್ಜಿದಾರ ಪರಃ ಶ್ರೀ ಜಿ.ಡಿ. ವಕೀಲರಿಂದಃ-</u>

ನಾನು ಐ.ಜಿ. ರಸ್ತೆಯಲ್ಲಿ ಸೈಕಲ್ ರಿಪೇರಿ ಅಂಗಡಿಯನ್ನ ನಡೆಸುತ್ತಿದ್ದೇನೆ. ಅರ್ಜಿದಾರರು ಮತ್ತು ಎದುರುದಾರರು ಎಂದರೇನು ಮತ್ತು ಅವರು ಯಾರು ಯಾರು ಎಂದು ನನಗೆ ಗೊತ್ತಿಲ್ಲ. ಅರ್ಜಿದಾರರು ಮತ್ತು ಎದುರುದಾರ ತಂದೆಯ ಹೆಸರು ದೇವೇಗೌಡರು. ಸಾಕ್ಷಿ ಮುಂದುವರಿದು ಅವರು ಶಿಕ್ಷಕರಾಗಿದ್ದರು ಮತ್ತು ಅವರು ನಮ್ಮ ಅಂಗಡಿಗೆ ಬಂದು ಕೂರುತ್ತಿದ್ದರು ಎನ್ನುತ್ತಾರೆ. ನಾನು 9 ನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ದೇವೇಗೌಡರ ಶಿಷ್ಯನಲ್ಲ. ನಾನು ವಿಲ್ ನ ಮೇಲೆ ಉಪನೊಂದಣಾಧಿಕಾರಿ ಕಛೇರಿಯಲ್ಲಿ ಸಹಿ ಮಾಡಿದ್ದೇನೆ. ಎಷ್ಟು ಗಂಟೆಗೆ ಉಪನೊಂದಣಾಧಿಕಾರಿ ಕಛೇರಿಗೆ ಹೋಗಿದ್ದೀರಾ ಎಂದರೆ ಸಾಕ್ಷಿ ಮಧ್ಯಾಹ್ನದ ವೇಳೆ ಹೋಗಿದ್ದೆವು ಎನ್ನುತ್ತಾರೆ. ವಿಲ್ ನ ಮೇಲೆ ಯಾರು ಯಾರು ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ದೇವೇಗೌಡ ಮೇಸ್ಟ್ರು ಮೊದಲು ಹಾಕಿದರು ಆನಂತರ ನಾನು ಸಹಿ ಹಾಕಿದೆ ಎನ್ನುತ್ತಾರೆ. ಸಾಕ್ಷಿ ಮುಂದುವರಿದು ನಾವು ಸಹಿ ಮಾಡಿದ ಕಾಲಕ್ಕೆ ಇನ್ನೊಬ್ಬರು ಇದ್ದರು ಎನ್ನುತ್ತಾರೆ. ದೇವೇಗೌಡರು ವಿಲ್ನ ಮೇಲೆ ಸಹಿ ಮಾಡಿದ ನಂತರ ನಾನು ಮತ್ತು ಮತ್ತೊಬ್ಬರು ಸಹಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ◌ೀವೇಗೌಡರ ವಿಲ್ ಗೆ ಸಾಕ್ಷಿದಾರನಲ್ಲ ಎಂದರೆ ಸರಿಯಲ್ಲ.

ಎಫ್.ಡಿ.ಪಿ. ನಂಃ 20/2017
ಆರ್.ಡಬ್ಲ್ಯೂಃ 3

<u>ಮರು ಸವಾಲುಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ